ವಿಧಾನ ಇದೆಯಲ್ಲಾ ಅದರಲ್ಲಿ ಏನು ತಂತ್ರ ಬಳಸಿದ್ದಿರಿ, ಯಾವ ಜಾಲವನ್ನು ಉಪಯೋಗಿಸಿದ್ದಿರಿ ಅದನ್ನೆಲ್ಲಾ ಬಿಡಿಸಿ ಹೇಳಿ ಎಂದು.

ಶ್ರೀ ಜೆ.ಹೆಚ್.ಪಟೇಲ್: ಶ್ರೀ ವಾಟಾಳ್‌ರವರೇ, ಮಲೆಯ ಮಹದೇಶ್ವರ ಬೆಟ್ಟಕ್ಕೆ ಹೋದಾಗ ನಾನು ಆ ದೇವರನ್ನು ಕೇಳಿದ್ದಿಷ್ಟೆ, ದೇವರೇ ಅವನಿಗೆ ಒಳ್ಳೆಯ ಬುದ್ಧಿ ಕೊಡು ಎಂದು ಕೇಳಿದ್ದೆ. ಆ ಕೆಲಸವಾಗಿದೆ.

ಶ್ರೀ ವಾಟಾಳ್ ನಾಗರಾಜ್: ಆ ಮಹದೇಶ್ವರನ ಬಗ್ಗೆ ನಿಮಗೆ ಭಕ್ತಿ ಬಂತಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಟ್ಟಿನಲ್ಲಿ ಯಾವುದಾದರೂ ಒಂದು ದೇವರನ್ನು ಇಟ್ಟುಕೊಂಡು ಹೇಳುತ್ತೀರಿ. ಮೊನ್ನೆ ಬಜೆಟ್ ಸೆಷನ್‌ನಲ್ಲಿ ಬಸವಣ್ಣ, ಶಂಕರಾಚಾರ್ಯರನ್ನು ಇಟ್ಟುಕೊಂಡು ಮುಗಿಸಿದರು. ಈಗ ವೀರಪ್ಪನ್ ವಿಷಯಕ್ಕೆ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋದರು.

ವಿಷಯ: ಚನ್ನರಾಯಪಟ್ಟಣದಲ್ಲಿ ದರೋಡೆ

ಶ್ರೀ ಸಿ.ಎಸ್.ಪುಟ್ಟೇಗೌಡ (ಚನ್ನರಾಯಪಟ್ಟಣ): ಇದುವರೆಗೆ ಬಹಳ ಸುದೀರ್ಘವಾಗಿ ಕಾಡುಗಳ್ಳ ವೀರಪ್ಪನ್ ಬಗ್ಗೆ ಚರ್ಚೆ ಮಾಡಿ ಹಿರಿಯ ಮುಖಂಡರೆಲ್ಲಾ ನಮಗೆ ತಿಳುವಳಿಕೆ ಕೊಟ್ಟಿದ್ದಾರೆ. ನಮಗೆ ಹಳ್ಳಿಯ ಜನ ಒಂದಿಷ್ಟು ತಿಳುವಳಿಕೆ ಕೊಟ್ಟಿದ್ದರು, ನಮ್ಮೂರಿನಲ್ಲಿ ರಾತ್ರಿ ದರೋಡೆಯಾಗಿ ಒಬ್ಬಳ ಪ್ರಾಣ ಹೋಗಿ ಗಂಡನ ಪ್ರಾಣ ಹೋಗುವ ಸ್ಥಿತಿಯಲ್ಲಿದೆ. ಆತ ನಿಮಾನ್ಸ್‌ನಲ್ಲಿದ್ದಾನೆ. ಅದರ ಸಲುವಾಗಿ ಯಾರೋ ಪಾಪ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ರೋಡ್‌ನಲ್ಲಿ ಬಂದು ಬಸ್ ಅಡ್ಡ ಹಾಕಿ ಊರಿನಲ್ಲಿ ಪೊಲೀಸ್ ಸ್ಟೇಷನ್ ಎದುರಿಗೆ ಅಥವಾ ತಾಲ್ಲೂಕು ಆಫೀಸ್ ಎದುರಿಗೆ ಯಾರಾದರೂ ಬಡವರಿಗೆ ಸಹಾಯ ಮಾಡಿ ದೊಡ್ಡಸ್ತಿಕೆ ಪಡೆಯುವುದಕ್ಕೆ ಹೋಗಿ ಅಲ್ಲಿ ಗೋಲಿಬಾರ್ ಆಗಿ ಅವನು ಅಲ್ಲಿ ಸತ್ತಿದ್ದಾನೆ. ಈ ಊರಿನ ಕಾಡುಗಳ್ಳರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಸಂಬಂಧಪಟ್ಟವರಿಗೆ ಹೇಳೋಣ.

(ಆ) ಸಹಕಾರ ಸಂಘಗಳಲ್ಲಿ ಸಾಲಗಳ ಮೇಲೆ ಹೆಚ್ಚು ಬಡ್ಡಿ ವಸೂಲಿ.

+ ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆ ತಂದಾಗ ಸಹಕಾರ ಸಚಿವರು ಕೊಟ್ಟ ಉತ್ತರದಿಂದಾಗಿ ಇವೊತ್ತು ನಿಯಮ-69ರ ಕೆಳಗೆ ಚರ್ಚೆ ಆರಂಭವಾಗಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಕೊಡುತ್ತಿರುವ ಸಾಲದ ಮೇಲಿನ ಬಡ್ಡಿ ಬಹಳ ಜಾಸ್ತಿಯಾಗಿದೆ. ಇದು ನಿಯಂತ್ರಣ